**ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹುಣಸೂರು**

**C.C. 548/2019**

**ಸಿ.ಡಬ್ಲ್ಯೂ-1, ಪಿ.ಡಬ್ಲ್ಯೂ-1**

ದಿ: **25.06.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| **ಸಾಕ್ಷಿಯ ಹೆಸರು** | ಗೌರಮ್ಮ |
| **ತಂದೆ/ಗಂಡನ ಹೆಸರು** | ವೆಂಕಟೇಶ್ ಗೌಡ |
| **ವಯಸ್ಸು** | 70 ವರ್ಷ |
| **ಕೆಲಸ** | ಗೃಹಿಣಿ |
| ವಾಸಸ್ಥಳ | ಹೊಟಗಳ್ಳಿ, ಮೈಸೂರು |

**(2 ನೇ ಆರೋಪಿ ಗೈರುಹಾಜರಿದ್ದು, ಅವರ ಪರ ವಕೀಲರು ವಿನಾಯಿತಿ ಅರ್ಜಿ ಸಲ್ಲಿಸಿದ್ದು, ಅವರ ಗುರುತಿಸುವಿಕೆಗೆ ತಕರಾರು ಇಲ್ಲ ಎಂದು ತಿಳಿಸಿರುತ್ತಾರೆ).**

**ಮುಖ್ಯ ವಿಚಾರಣೆ ಮಾನ್ಯ ಎ.ಪಿ.ಪಿ.ಯವರಿಂದ:**

**1** ನೇ ಆರೋಪಿ ನನ್ನ ತಮ್ಮನ ಮಗ. ಸಾಕ್ಷಿ ನ್ಯಾಯಾಲಯದ ಮುಂದಿರುವ **1** ನೇ ಆರೋಪಿಯನ್ನು ನೋಡಿ ಗುರುತಿಸಿದ್ದಾರೆ. ಚಾಸಾ **4** ಮತ್ತು **5** ಗೊತ್ತು. **2015** ನೇ ಇಸವಿಯಲ್ಲಿ **1** ನೇ ಆರೋಪಿ ನನ್ನ ಬಳಿ **50,000** ರೂ.ಗಳ ಸಾಲವನ್ನು ಪಡೆದಿದ್ದರು. ನಾನು ಸಾಲದ ಹಣವನ್ನು ನೀಡಲು ಕೇಳಿದಾಗ **1** ನೇ ಆರೋಪಿ ನನಗೆ ಅವಾಚ್ಯ ಶಬ್ದಗಳಿಂದ ನಿಂದಿಸಿದರು. **1** ನೇ ಆರೋಪಿ ಹಣವನ್ನು ವಾಪಸ್ಸು ನೀಡುವುದಾಗಿ ನನಗೆ ಕರೆ ಮಾಡಿ ಕರೆದನು. ನಾನು ಕಿರಸೊಡ್ಲು ಊರಿನಲ್ಲಿರುವ ಬಸವೇಶ್ವರ ದೇವಸ್ಥಾನದ ಬಳಿ ಹೋದೆ. **1** ನೇ ಆರೋಪಿ ಅಲ್ಲಿ ಇದ್ದರು. ಆಗ ನನಗೆ ಅವಾಚ್ಯಶಬ್ದಗಳಿಂದ ಬೈದು, ಮಚ್ಚಿನಿಂದ ನನಗೆ ಹೊಡೆದನು. **2** ನೇ ಆರೋಪಿ ಕಲ್ಲಿನಿಂದ ಬೆನ್ನಿಗೆ ಹೊಡೆದನು. ನನ್ನ ತಾಯಿ ಅಲ್ಲಿಗೆ ಬಂದು ಜಗಳವನ್ನು ಬಿಡಿಸಿ ನನ್ನನ್ನು ಮನೆಗೆ ಕರೆದುಕೊಂಡು ಹೋದರು. ನಂತರ ನನ್ನನ್ನು ಹುಣಸೂರಿನ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದರು. ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಕೆ ಆರ್ ಆಸ್ಪತ್ರೆಗೆ ಹೋದೆನು. ನಂತರ ಚಿಕಿತ್ಸೆ ಪಡೆದು ಬಿಳಿಕೆರೆ ಪೊಲೀಸ್ ಠಾಣೆಗೆ ಹೋಗಿ ದೂರನ್ನು ನೀಡಿರುತ್ತೇನೆ. ಸಾಕ್ಷಿಗೆ ದೂರನ್ನು ತೋರಿಸಿದ್ದು, ಅದನ್ನು ನಿಪಿ-**1** ಎಂದು ಗುರುತಿಸಲಾಯಿತು.

ನಂತರ ಪೊಲೀಸರು ಕಿರಸೊಡ್ಡು ಊರಿನಲ್ಲಿರುವ ಬಸವೇಶ್ವರ ದೇವಸ್ಥಾನದ ಬಳಿ ಬಂದರು. ಅಲ್ಲಿ ಮಹಜರ್ ಕ್ರಮ ಜರುಗಿಸಿದರು. ಆ ಸಮಯದಲ್ಲಿ ನನ್ನೊಂದಿಗೆ ಚಾಸಾ**2** ಮತ್ತು **8** ರವರು ಇದ್ದರು. ಸಂಜೆ **5** ರಿಂದ **6** ಗಂಟೆ ವರೆಗೆ ಪೊಲೀಸರು ಮಹಜರ್ ಜರುಗಿಸಿರುತ್ತಾರೆ. ಮಹಜರ್ ಜರುಗಿಸಿ ಪೊಲೀಸರು ಸ್ಥಳದಿಂದ ಮಚ್ಚು ಮತ್ತು ಕಲ್ಲನ್ನು ಅಮಾನತ್ತುಪಡಿಸಿಕೊಂಡರು. ಅವುಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಕಲ್ಲನ್ನು ಮು ಮಾ **1** ಹಾಗೂ ಮಚ್ಚನ್ನು ಮು ಮಾ **2** ಎಂದು ಗುರುತಿಸಲಾಯಿತು. ಸಾಕ್ಷಿಗೆ ಮಹಜರ್ ನ್ನು ತೋರಿಸಿದ್ದು, ಅದನ್ನು ನಿಪಿ-**2** ಎಂದು ಗುರುತಿಸಲಾಯಿತು. ಪೊಲೀಸರಿಗೆ ಸ್ಥಳವನ್ನು ನಾನೇ ತೋರಿಸಿರುತ್ತೇನೆ. ನಾನು ಪೋಲೀಸರ ಮುಂದೆ ಮರುಹೇಳಿಕೆ ನೀಡಿರುತ್ತೇನೆ.

**(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಸ.ಸ.ಅ. ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಗಿದೆ.)**

**<u>ಪಾಟೀ ಸವಾಲು ಎಪಿಪಿರವರಿಂದಃ</u>**

ದಿಃ**21.12.2014** ರಂದು **1** ನೇ ಆರೋಪಿ ಕಾರನ್ನು ಖರೀದಿಸಲು ನಿಮ್ಮ ಬಳಿ ಸಾಲವನ್ನು ಪಡೆದಿರುತ್ತಾರೆ ಎಂದರೆ ಸರಿ. ದಿಃ**23.05.2015** ರಂದು ಸಾಲವನ್ನು ಹಿಂದಿರುಗಿಸುತ್ತೇನೆ ಎಂದು ನಿಮ್ಮನ್ನು **1** ನೇ ಆರೋಪಿ ಕರೆದಿದ್ದರು ಎಂದರೆ ಸರಿ. ದಿಃ**28.05.2015** ರಂದು ಪೊಲೀಸರು ಸ್ಥಳಕ್ಕೆ ಬಂದು ಮಹಜರ್ ಕ್ರಮ ಜರುಗಿಸಿದ್ದರು ಎಂದರೆ ಸರಿ. ಆ ಸಮಯದಲ್ಲಿ ಚಾಸಾ **3** ರವರೂ ಸ್ಥಳದಲ್ಲಿ ಹಾಜರಿದ್ದರು ಎಂದರೆ ಸರಿ.

ಪಾಟೀಸವಾಲು ಆರೋಪಿ ಪರ ಶ್ರೀ ಇ ಬಿ ಆರ್ ವಕೀಲರಿಂದಃ

ಚಾಸಾ**8** ಗಲಾಟೆ ಆಯಿತು ಎಂದು ಹೇಳುವ ದಿನದಂದು ಅವರು ಮನೆಯಲ್ಲಿ ಇದ್ದರು. ನಾನು **1973** ಇಸವಿಯಲ್ಲಿ ವಿವಾಹವಾಗಿರುತ್ತೇನೆ. ಆಗಿಂದಲೂ ನಾನು ನನ್ನ ಯಜಮಾನರ ಜೊತೆ ಇದ್ದೇನೆ.

2ನೇ ಆರೋಪಿ ಹಾಗೂ ನನ್ನ ತಂದೆ ತಾಯಿ ಬೇರೆ ಬೇರೆ ಮನೆಯಲ್ಲಿದ್ದಾರೆ ಎಂದರೆ ಸರಿ. ನಿಮ್ಮ ಹಾಗೂ ಆರೋಪಿತರ ನಡುವೆ ಸಿವಿಲ್ ವ್ಯಾಜ್ಯ ಇತ್ತು ಎಂದರೆ ಸರಿ. ಗಲಾಟೆ ಆಯಿತು ಎಂದು ಹೇಳುವ ಸಮಯಕ್ಕಿಂತ ಪೂರ್ವದಲ್ಲಿಯೇ ಸಿವಿಲ್ ವ್ಯಾಜ್ಯ ಇತ್ತು ಎಂದರೆ ಸರಿ. ಸಿವಿಲ್ ವ್ಯಾಜ್ಯ ಆಗುವ ಸಮಯದಲ್ಲಿ ನಿಮ್ಮ ಹಾಗೂ 2ನೇ ಆರೋಪಿಯ ನಡುವೆ ಮನಃಸ್ತಾಪ ಇತ್ತು ಎಂದರೆ ಸರಿಯಲ್ಲ. ನಾನು ಕಿರಸೊಡ್ಲು ಗ್ರಾಮಕ್ಕೆ ಹೋದಾಗ ರಾತ್ರಿ 9 ರಿಂದ 9.30 ಗಂಟೆ ಆಗಿತ್ತು.

ನಿಪಿ1 ರಲ್ಲಿ ನಮೂದಾಗಿರುವ ವಿಚಾರಗಳು ನನಗೆ ತಿಳಿದಿದೆ. ನನಗೆ ಕನ್ನಡ ಓದಲು, ಬರೆಯಲು ಬರುವುದಿಲ್ಲ. ನಿಪಿ1 ನ್ನು ಪೊಲೀಸರು ಬರೆದಿರುತ್ತಾರೆ. ಮೈಸೂರಿನ ಕೆ ಆರ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿತ್ತು ಎಂದು ಹೇಳಿದ್ದು ಎಷ್ಟು ದಿನ ಚಿಕಿತ್ಸೆ ಪಡೆದಿದ್ದೀರಾ ಎಂದರೆ ಸಾಕ್ಷಿ ಒಂದು ದಿನ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ಚಿಕಿತ್ಸೆ ಪಡೆದಿದ್ದೆ. ನಿಪಿ1 ರಲ್ಲಿ ಮೈಸೂರಿನ ಕೆ ಆರ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುವ ವಿಚಾರ ನಮೂದಾಗಿದೆಯಾ ಎಂದರೆ ನಮೂದಾಗಿದೆ. ನಾನು ಠಾಣೆಗೆ ದೂರನ್ನು ನೀಡಲು ಹೋದಾಗ ಮಧ್ಯಾಹ್ನ 1 ಗಂಟೆ ಆಗಿರುತ್ತದೆ. ಮೈಸೂರಿನ ಕೆ ಆರ್ ಆಸ್ಪತ್ರೆಯಿಂದ ನೇರವಾಗಿ ಠಾಣೆಗೆ ದೂರನ್ನು ನೀಡಲು ಹೋಗಿರುತ್ತೇನೆ ಎಂದರೆ ಸರಿ. ಠಾಣೆಯಲ್ಲಿ ನಾನು ಸುಮಾರು 5 ರಿಂದ 6 ಗಂಟೆವರೆಗೂ {hours} ಇದ್ದೆ. ನಾನು ಠಾಣೆಯಿಂದ ಹೊರಡುವಾಗ ಸಂಜೆ 6 ಗಂಟೆಯಾಗಿತ್ತು. ನೀವು ಪೊಲೀಸ್ ಠಾಣೆಯಲ್ಲಿ ಎಷ್ಟು ಸಹಿ ಹಾಕಿದ್ದೀರಾ ಎಂದರೆ ಸುಮಾರು 2 ರಿಂದ 3 ಸಹಿ ಹಾಕಿರುತ್ತೇನೆ, ಸಾಕ್ಷಿ ಮುಂದುವರಿದು ನನಗೆ ಸರಿಯಾಗಿ ನೆನಪಿಲ್ಲ, ನನಗೆ ಓದಲು ಬರೆಯಲು ಬರುವುದಿಲ್ಲ. ನಿಪಿ2 ರಲ್ಲಿ ಕಾಣುವ ಹೆಬ್ಬೆಟ್ಟಿನ ಗುರುತನ್ನು ನೀವು ಪೊಲೀಸ್ ಠಾಣೆಯಲ್ಲಿ ಮಾಡಿದ್ದೀರಾ ಎಂದರೆ ಸಾಕ್ಷಿ ನನಗೆ ಸಹಿಯಾಗಿ ಗೊತ್ತಿಲ್ಲ ಅವರು ಬರೆದಿರುವ ವಿಚಾರಗಳಿಗೆ ಸಹಿ ಮಾಡಲು ಹೇಳಿದರು, ನಾನು ಮಾಡಿರುತ್ತೇನೆ.

ನಿಪಿ2 ರಲ್ಲಿ ಬರೆದಿರುವ ವಿಚಾರಗಳು ನನಗೆ ತಿಳಿದಿದೆ. ನಿಪಿ2 ರಲ್ಲಿ ಬರೆದಿರುವ ವಿಚಾರವನ್ನು ನನಗೆ ಠಾಣೆಯಲ್ಲಿ ಓದಿ ಹೇಳಿದರು. ನಿಪಿ2 ನ್ನು ಠಾಣೆಯಲ್ಲಿ ಓದಿ ಹೇಳಿದ ನಂತರ ನೀವು ಠಾಣೆಯಲ್ಲಿ ಹೆಬ್ಬೆಟ್ಟು ಹಾಕಿರುತ್ತೀರಿ ಎಂದರೆ ಸರಿ. ಸಾಮಾನ್ಯವಾಗಿ ಮು ಮಾ 1 ಮತ್ತು 2 ರಿಂದ ಒಬ್ಬ ವ್ಯಕ್ತಿಗೆ ಹಲ್ಲೆ ಆದರೆ ಅವರಿಗೆ ತೀವ್ರ ಸ್ವರೂಪದ ಗಾಯ ಆಗಿರುತ್ತದೆ ಎಂದರೆ ಸಾಕ್ಷಿ ನನಗೆ ತಲೆಯಲ್ಲಿ 8 ರಿಂದ 10 ಹೊಲಿಗೆ ಹಾಕಿರುತ್ತಾರೆ. ಗಲಾಟೆಯಿಂದ ನನ್ನ ಸೀರೆಯ ಮೇಲೆ ರಕ್ತದ ಕಲೆಗಳು ಆಗಿದ್ದವು. ಸದರಿ ಸೀರೆಯನ್ನು ಪೊಲೀಸರು ಅಮಾನತ್ತುಪಡಿಸಿಕೊಂಡಿರುವುದಿಲ್ಲ. ಸಾಕ್ಷಿ ಮುಂದುವರಿದು ನನ್ನ ತಾಯಿಗೆ ತಿಳಿಯದೇ ಅವರು ಆ ಸೀರೆಯನ್ನು ಒಗೆದಿದ್ದರು. ಆ ಸೀರೆಯನ್ನು ಒಗೆದಿದ್ದು ಎಂದು ಹೇಳಿದ್ದು, ಯಾವ ದಿನಾಂಕದಂದು ಒಗೆದಿದ್ದರು ಎಂದು ನನಗೆ ಗೊತ್ತಿಲ್ಲ. ನೀವು ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಎಷ್ಟು ಬಾರಿ ಪೊಲೀಸ್ ಠಾಣೆಗೆ ಹೋಗಿದ್ದೀರಾ ಎಂದರೆ ನನಗೆ ನೆನಪಿಲ್ಲ. ಮೂ ಮಾ 1 ಮತ್ತು 2 ನ್ನು ನೀವು ಹಾಗೂ ಪೊಲೀಸರು ಸೇರಿ ಈ ಪ್ರಕರಣಕ್ಕಾಗಿ  ಸೃಷ್ಟಿಸಿದ್ದೀರಾ ಎಂದರೆ ಸರಿಯಲ್ಲ. ನಿಪಿ1 ನ್ನು ನೀವು ಹಾಗೂ ಪೊಲೀಸರು ಶಾಮೀಲಾಗಿ  ಈ ಪ್ರಕರಣಕ್ಕಾಗಿ  ಸೃಷ್ಟಿಸಿದ್ದೀರಾ ಎಂದರೆ ಸರಿಯಲ್ಲ. ಪೊಲೀಸರು ನಿಮ್ಮ ಹಾಗೂ ಚಾಸಾ2 ಮತ್ತು 3 ರವರ ಸಮಕ್ಷಮ ಯಾವುದೇ ಮಹಜರ್ ಕ್ರಮ ಜರುಗಿಸಿರುವುದಿಲ್ಲ, ನೀವು ಆರೋಪಿತರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಾ ಎಂದರೆ ಸರಿಯಲ್ಲ. ನೀವು ಪೊಲೀಸರು ಸಮಕ್ಷಮ ಯಾವುದೇ ಹೇಳಿಕೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಿಮ್ಮ ಹಾಗೂ 1 ನೇ ಆರೋಪಿಯ ನಡುವೆ ಯಾವುದೇ ಹಣಕಾಸಿನ ವ್ಯವಹಾರ ನಡೆದಿಲ್ಲ,  ನೀವು ಆರೋಪಿತರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಾ ಎಂದರೆ ಸರಿಯಲ್ಲ. ನಿಮ್ಮ ಹಾಗೂ 2 ನೇ ಆರೋಪಿಯ ನಡುವೆ ಸಿವಿಲ್ ವ್ಯಾಜ್ಯವಿದ್ದ ಕಾರಣ ಮನಃಸ್ತಾಪ ಇತ್ತು, ಆದ್ದರಿಂದ ನೀವು ಅವರಿಗೆ ತೊಂದರೆ ಕೊಡಲು ಈ ಪ್ರಕರಣವನ್ನು ಹೂಡಿ, ಸುಳ್ಳು ದೂರನ್ನು ಸೃಷ್ಟಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ

ಸರಿಯಲ್ಲ. ನೀವು ಹೇಳುವ ಹಾಗೆ ಯಾವುದೇ ಗಲಾಟೆ ನಡೆದಿರುವುದಿಲ್ಲ, ನಿಮಗೆ ಯಾವುದೇ ರೀತಿಯ ಹಲ್ಲೆ ಆಗಿರುವುದಿಲ್ಲ ಮತ್ತು ನೀವು ಯಾವುದೇ ಚಿಕಿತ್ಸೆ ಪಡೆದಿರುವುದಿಲ್ಲ ಎಂದರೆ ಸರಿಯಲ್ಲ. ಯಾವುದೇ ಗಲಾಟೆ ಆಗದ ಕಾರಣ ಚಾಸಾ **4** ರವರು ಗಲಾಟೆಯನ್ನು ಬಿಡಿಸಿರುವುದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸರಿ ಇದೆ.

ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ,

ಹುಣಸೂರು.